ಮೂಲ ದಾವಾ ನಂಃ 90/2017

ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **20-01-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃಶ್ರೀ. ಕೆ ಎಸ್ ಬಿ, ವಕೀಲರಿಂದಃ**

ಕರ್ನಾಟಕ ಭೂ ಸುಧಾರಣ ಕಾಯ್ದೆ ಬಂದ ನಂತರ ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ರೆಕಾರ್ಡಿನಲ್ಲಿ ಕಾಲಂ ನಂ.9 ರಲ್ಲಿ ಕರ್ನಾಟಕ ಸರ್ಕಾರ ಎಂದು ನಮೂದಾಗಿತ್ತು ಎಂದರೆ ಸರಿ. ಕರ್ನಾಟಕ ಸರ್ಕಾರ ಎಂದು ನಮೂದಾಗಿದ್ದರ ಬಗ್ಗೆ ನಾನು 1982 ರಲ್ಲಿ ತಕರಾರು ಮಾಡಿದ್ದೇನೆ. ನಾನು ಅದಕ್ಕೆ ತಕರಾರು ಅರ್ಜಿಯನ್ನು ಎಸಿ ಆಫೀಸಿಗೆ ಸಲ್ಲಿಸಿದ್ದೇನೆ. ಅದರ ಮೇಲೆ ಏನು ಆದೇಶ ಆಗಿತ್ತು ಎಂದು ನೆನಪಿಲ್ಲ. ಆ ರೀತಿ ಆದೇಶವಾದ ಬಗ್ಗೆ ಏನಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿಯು ಆಫೀಸಿನಲ್ಲಿ ತೆಗೆದು ನೋಡಬೇಕೆಂದು ನುಡಿದಿರುತ್ತಾರೆ. ಏನು ಆದೇಶ ಆಗಿತ್ತು ಎಂಬ ಬಗ್ಗೆ ನಾನೇನು ಚೌಕಾಸಿ ಮಾಡಿದ್ದು ಇಲ್ಲ. ಸಾಕ್ಷಿಯು

ಮುಂದುವರೆದು 1982 ರಲ್ಲಿ ಭೂ ನ್ಯಾಯ ಮಂಡಳಿಯಿಂದ ಆಸ್ತಿಯನ್ನು ನಮಗೆ ಬಿಟ್ಟುಕೊಟ್ಟಿದ್ದಾರೆ ಎಂದು ನುಡಿದಿರುತ್ತಾರೆ. ನನ್ನ ಅಜ್ಜ ದಾವಾಸ್ತಿಗಳನ್ನು ಹೊರತುಪಡಿಸಿ ಬೇರೆ ಸರ್ವೇ ನಂಬರಗಳಿಗೆ ಅರ್ಜಿ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಪ್ರತಿವಾದಿಯರು ದಾವಾಸ್ತಿಗೆ ಸಂಬಂಧಿಸಿದಂತೆ 7 ಎ ಅರ್ಜಿಗಳನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಮೊದಲು ಅರ್ಜಿ ನಮೂನೆ 7 ಹಾಗೂ ನಂತರ 7 ಎ ಸಲ್ಲಿಸಿದ್ದಾರೆ ಎಂದು ನುಡಿದಿರುತ್ತಾರೆ. ಅರ್ಜಿ ನಮೂನೆ 7 ಸಲ್ಲಿಸಿದ್ದರ ಬಗ್ಗೆ ನನ್ನ ಬಳಿ ದಾಖಲೆ ಇದೆ. ಸಾಕ್ಷಿಯು ಮುಂದುವರೆದು ಬೇರೆ ಜಮೀನಿಗೆ ಅರ್ಜಿ ನಮೂನೆ 7 ಸಲ್ಲಿಸಿದ್ದಾರೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಪ್ರತಿವಾದಿಯರು 7 ಎ ಸಲ್ಲಿಸಿದ್ದರಿಂದ ಭೂ ನ್ಯಾಯ ಮಂಡಳಿಯಿಂದ ದಾವಾಸ್ತಿ ಅವರಿಗೆ ಮಂಜೂರಾಗಿದೆ ಎಂದರೆ ಸಾಕ್ಷಿಯು ನಮಗೆ ನೋಟೀಸು ಮಾಡದೇ ಅವರಿಗೆ ದಾವಾಸ್ತಿ ಮಂಜೂರು ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ಅದರ ನಂತರ ಪ್ರತಿವಾದಿಯರಿಗೆ ಮಂಜೂರಾದ ಬಗ್ಗೆ ಚಾಲೆಂಜ್ ಮಾಡಿದ್ದು ಇದೆ. ನಾನು ಕರ್ನಾಟಕ ಅಪಿಲೇಟ್ ಟ್ರಿಬ್ಯುನಲ್ ನಲ್ಲಿ ದಾವಾಸ್ತಿ ನನ್ನ ಕಬ್ಜ ಇತ್ತು ಎಂದು ಸಾಧನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನಾನು ಸಾಧನೆ ಮಾಡಿದ್ದು ಇರುವುದಿಲ್ಲ, ವಾದಿಸಿದ್ದೇನೆ ಎಂದು ನುಡಿದಿರುತ್ತಾರೆ. ಅದನ್ನು ತೋರಿಸುವ ಸಲುವಾಗಿ ನಾನು ದಾಖಲೆಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಅದರ ನಂತರ ಕರ್ನಾಟಕ ಅಪಿಲೇಟ್ ಟ್ರಿಬ್ಯುನಲ್ ನಲ್ಲಿ ಮರುವಿಚಾರಣೆಗೆ ಕಳುಹಿಸಿದ್ದಾರೆ. ಸಾಕ್ಷಿಗೆ ಅದರ ನಂತರ ಭೂ ನ್ಯಾಯ ಮಂಡಳಿಯಲ್ಲಿ ಪ್ರತಿವಾದಿಯರಿಗೆ ಆಸ್ತಿ ಮಂಜೂರಾಗಿದೆ. ಸಾಕ್ಷಿಯು ಮುಂದುವರೆದು ನಮಗೆ ನೋಟೀಸು ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ಅದರ ಪೂರ್ವದಲ್ಲಿ ಭೂ ನ್ಯಾಯ ಮಂಡಳಿಯವರು ದಾವಾಸ್ತಿಗೆ ಬಂದು ಪ್ರತಿವಾದಿಯರ ಕಬ್ಜ ಇದೆ ಎಂದು ವರದಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿಯರ ಹಾಗೂ ನಮ್ಮದು ಕಬ್ಜ ಇದೆ ಎಂದು ವರದಿ ಸಲ್ಲಿಸಿದ್ದಾರೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಮ್ಮ ಕಬ್ಜಾದಲ್ಲಿ ಇದೆ ಎಂಬ ವರದಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿಯು ಪಡೆಯಬೇಕು ಎಂದು ನುಡಿದಿರುತ್ತಾರೆ. ಭೂ ನ್ಯಾಯ ಮಂಡಳಿಯವರು ಪುನಃ ವಿಚಾರಣೆಗೆ ಬಂದ ನಂತರ ಸಾರಸಾರ ವಿಚಾರ ಮಾಡಿ ಪ್ರತಿವಾದಿಯರ ಕಬ್ಜಾ ಇದೆ ಎಂದು ಮನಗಂಡು ಪ್ರತಿವಾದಿಯರಿಗೆ ಮಂಜೂರು ಮಾಡಿದ್ದಾರೆ ಎಂದರೆ ಸಾಕ್ಷಿಯು ಆದೇಶ ಮಾಡಿದ್ದು ಸರಿ ಇಲ್ಲ ಎಂದು ಕೆ ಎ ಟಿ ಗೆ ಅಪೀಲು ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಅಪೀಲು ಮಾಡಿದ್ದೇನೆ ಎಂಬ ಸಂಬಂಧ ಏನಾದರೂ ಕಾಗದ ಪತ್ರಗಳನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಮುಂದೆ ಸಲ್ಲಿಸುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಸ್ಥಳವು ಯಾವ ಕಾಲಕ್ಕೂ ನಮ್ಮದು ಕಬ್ಜಾ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ಸತಾಯಿಸುವ ಸಲುವಾಗಿ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ಥಳದಲ್ಲಿ ಯಾವುದೇ ಕಾಲಕ್ಕೂ ನಮಗೆ ಹಕ್ಕು ಇದ್ದದ್ದು ಇಲ್ಲ ಎಂದರೆ ಸರಿಯಲ್ಲ. ಕೆ ಎ ಟಿ ಯ ಆದೇಶದಲ್ಲಿ ಎಲ್ಲಿಯೂ ನನಗೆ ಕಬ್ಜಾ ಇದೆ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿ ಡಬ್ಲುಃ 1**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**